ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಕಾಶ ಆದ್ದು. [ನಂ. 4.

ಬೆಂಗಳೂರು, ಗುರುವಾರ, ಜನವರಿ ತಾ॥ 28, ಸ॥ 1904.

IIನೆ ಭಾಗ.

ಇಂಡ್ಯಗೆವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮೈಸೂರಿಂದ ಕೊಡೋಕಾದ ಇಸ್ತಿಹಾರ್‌ನಾಮೆಗಳು.

ಮೈಸೂರು ರೆವೆನ್ಯೂ ಸರ್ವೆ ಮತ್ತು ಸೆಟಲ್ಮೆಂಟ್ ಇಲಾಖೆ.

ಇಸ್ತಿಹಾರ್ನಾಮೆ.

ತಾರೀಖು 11ನೆ ಜನವರಿ 1904.

ನಂ. 685, ಸಮಸ್ತ ಜನಗಳಿಗೂ ತಿಳಿಯುವದಕ್ಕೋಸ್ಕರ ಈ ಮೂಲಕ ಪಾಯಿಷ್ ಮಾಡಿಸಲ್ಪಡುವದೇನಂದರೆ, ಸಾಬಕ ಕೆಂಗೇರಿ ತಾಲ್ಲೂಕಿಗೆ ಸೇರಿದ್ದ ಬಿಡದಿ ಮತ್ತು ಕಾವಲಿಕೆರೆ ಹೋಬಳಿಗಳಲ್ಲಿ ರಿಸರ್ವೆ ಕೆಲಸಗಳು ಫೆಬ್ರವರಿಲ್ಲಿ ಪ್ರಾರಂಭಿಸಲ್ಪಡುವವು.

ಜೆ. ಪಿ. ಗ್ರಾಂಟ್,
ಸರ್ವೆ ಮತ್ತು ಸೆಟ್ಲಮೆಂಟ್ ಕಮಿಷನರ್, ಮೈಸೂರು.

ವಿದ್ಯಾಭ್ಯಾಸದ ಇಲಾಖೆ.

ನೋಟಿಫಿಕೇರ್ಷ, ಡಿ. ನಂಬರು 33.

ಬೆಂಗಳೂರು, ತಾರೀಖು 18ನೆ ಜನವರಿ ಸ॥ 1904ನೆ ಇಸವಿ.

ಈ ಕೆಳಗೆ ನಮೂದಿಸುವ ಮದ್ದಗಿರಿ ತಾಲ್ಲೂಕು ರಾಂಪುರದ ಗವರ್ನ್‌ಮೆಂಟ್ ಕನ್ನಡ ಗರ್ಲ್ ಸ್ಕೂಲಿನ ಕಮಿಟಿ ಮೆಂಬರುಗಳನ್ನು ಪೊಕರರ್‌ಮಾಡಿರುತ್ತೆ.

ಪ್ರೆಸಿಡೆಂಟ್.

ಕೊರತಗೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರರು (ಎಕ್ಸ್ ಆಫಿಷಿಯೊ)

ಮೆಂಬರುಗಳು.

1. ರಾಂಪುರದ ಪಟೇಲ್ (ಎಕ್ಸ್ ಆಫಿಷಿಯೊ)
2. ರಾಂಪುರದ ಶ್ಯಾನುಭೋಗರು (ಎಕ್ಸ್ ಆಫಿಷಿಯೊ)
3. ಮಾ॥ ರಾ॥ ಕೃಷ್ಣಭಟ್ಟರು
4. ,, ನಂಜೈಯ್ಯನವರು
5. ,, ಬೆಂಗಳೂರು ಬಸಪ್ಪನವರು
6. ಮಾ॥ ರಾ॥ ಸಂಗೆ ನಾಗಪ್ಪನವರು
7. ,, ಅಪ್ಪಣ್ಣಯ್ಯನವರು
8. ,, ಗೋಟಡಿಕೆ ನಾಗಪ್ಪನವರು
9. ,, ರಾಂಪುರದ ಹೋಬಳಿ ಕನ್ನಡ ಬಾಲಕಾಪಾಠಶಾಲಾ ಪೆಡ್ಡಾಸ್ಟರು (ಎಕ್ಸ್ ಆಫಿಷಿಯೊ)

ನೋಟಿಫಿಕೇರ್ಷ, ಡಿ. ನಂಬರು 32.

ಬೆಂಗಳೂರು, ತಾರೀಖು 19ನೆ ಜನವರಿ ಸ॥ 1904ನೆ ಇಸವಿ.

ಈಗ ಉಪಯೋಗಿಸಲ್ಪಡುತ್ತಿರುವ ಕೃಷ್ಣಾಚಾರ್ಯರ ಲಘು ಭೂವಿವರಣೆ ಮತ್ತು ರಘುನಾಥರಾಯರ ಭೂವಿವರಣೆ Iನೆ ಭಾಗಗಳಿಗೆ ಬದಲಾಗಿ ಎಂ. ಬಿ. ಶ್ರೀನಿವಾಸಯ್ಯಂಗಾರ್ಯರ ಬಾಲ ಭೂವಿವರಣೆಯನ್ನು ಕನ್ನಡ II–IIIನೆ ತರಗತಿಗಳಲ್ಲಿಯೂ ಮತ್ತು ಆಂಗ್ಲೊ ವರ್ನಾಕ್ಯುಲರ್ I–IIನೆ ತರಗತಿಗಳಲ್ಲಿಯೂ ಉಪಯೋಗಿಸಲು ವಿಧಾಯಕ ಮಾಡಿರುತ್ತೆ.